# ಜಿ.ಪಂ.ಅಧ್ಯಕ್ಷೆ ಸೌಭಾಗ್ಯಬಸವರಾಜನ್ ಕರೆ

## ಸಮಾಜ ನಿರ್ಮಾಣಕ್ಕೆ ಯುವಶಕ್ತಿ ಬಳಕೆಯಾಗಬೇಕು

ಚಿತ್ರದುರ್ಗ

ಸದೃಢ, ಆರೋಗ್ಯವಂತ ಯುವಜನತೆ ದೇಶದ ಸಂಪತ್ತಾಗಿದೆ. ಯುವಶಕ್ತಿ ಮನಸ್ಸು ಮಾಡಿದರೆ ಸಮೃದ್ದಿಯಾದ ಸಮಾಜವನ್ನು ನಿರ್ಮಾಣ ಮಾಡಬಹುದಾಗಿದ್ದು ಈ ನಿಟ್ಟಿನಲ್ಲಿ ಸದ್ಬಳಕೆಯಾಗಲಿ ಎಂದು ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್ ತಿಳಿಸಿದರು.

ತ.ರಾ.ಸು. ರಂಗಮಂದಿರದಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಕಾಲೇಜ್ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ ಮತ್ತು ನಗರಸಭೆಯ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾದ ಸ್ವಾಮಿ ವಿವೇಕಾನಂದರ 155ನೇ ಜನ್ಮದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಯುವ ಜನತೆ ದುಶ್ಚಟಗಳಿಗೆ ಬಲಿಯಾಗದೆ ಸ್ವಾಮಿ ವಿವೇಕಾನಂದರ ವಿಚಾರ, ಆದರ್ಶಗಳನ್ನು ತಿಳಿದು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗಿ ಬಾಳಬೇಕು. ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ಘೋಷವಾಕ್ಯವನ್ನು ಯುವ ಸಮುದಾಯಕ್ಕೆ ಮತ್ತು ಜಗತ್ತಿಗೆ ಸಾರಿದ ಮಹಾನ್ ಯುವಜನತೆಯ ನಾಯಕ ಸ್ವಾಮಿ ವಿವೇಕಾನಂದರಾಗಿರುವರು. ಅವರ ಆದರ್ಶದಂತೆ ಮಕ್ಕಳು ಮೊದಲು ಅವರವರ ಮನೆಗೆ ಒಳ್ಳೆಯ ಮಕ್ಕಳಾಗಿ ಬದುಕಿದರೆ, ಅದೇ ಸಮಾಜಕ್ಕೆ ದಾರಿ ದೀಪವಾಗಬಹುದು ಎಂದರು.

ವಿವೇಕಾನಂದರಿಗೆ ದೇಶದ ಯುವ ಶಕ್ತಿಯ ಮೇಲೆ ಅಪಾರ ನಂಬಿಕೆ ಮತ್ತು



ವಿಶ್ವಾಸ ಇತ್ತು. ಈ ನಂಬಿಕೆಯನ್ನು ಒಳ್ಳೆಯ ಕಾರ್ಯ ಮಾಡುವ ಮೂಲಕ ಸಾಬೀತು ಪಡಿಸಲು ಸರಿ-ತಪ್ಪುಗಳ ವಿವೇಚನೆಯಿಂದ ಸರಿಯಾಗಿರುವುದನ್ನು ಆಯ್ಕೆಮಾಡಿಕೊಂಡು ವಿಶ್ವಕ್ಕೆ ಮಾದರಿಯಾಗುವಂತೆ ಅವರ ಮಾರ್ಗದರ್ಶನದಲ್ಲಿ ನಾವು, ನೀವು ಸಾಗಿ, ದೇಶಕ್ಕೆ ಒಂದಿಷ್ಟು ಕೊಡುಗೆಯನ್ನು ನೀಡೋಣ ಎಂದು ಕರೆ ನೀಡಿದರು.

ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಉಪನ್ಯಾಸ ನೀಡಿದ ಚಿತ್ರದುರ್ಗ ಶ್ರೀ ಶಾರದ ರಾಮಕೃಷ್ಣ ಆಶ್ರಮದ ಮುಖ್ಯಸ್ಥರಾದ ಶ್ರೀ ಸ್ವಾಮಿ ಬ್ರಹ್ಮನಿಷ್ಠಾನಂದಜೀಯವರು ಮಾತನಾಡಿ ನಾವು ಮುಂದೆ ಏನಾಗಬೇಕು, ನಮ್ಮಿಂದ ದೇಶಕ್ಕೆ ಏನು ಒಳ್ಳೆಯ ಕೊಡುಗೆಯನ್ನು ಕೊಡಬೇಕು ಎಂಬುದರ ಬಗ್ಗೆ ದೈನಂದಿನ ಜೀವನದಲ್ಲಿ ಆತ್ಮಾವಲೋಕನ ಮಾಡಿಕೊಳ್ಳುತ್ತಿರಬೇಕು.

ಅಸಾಧ್ಯಯೆಂಬುವುದು ಯಾವುದು ಇಲ್ಲ, ಸಾಮಾನ್ಯ ಮನುಷ್ಯರು ಮನಸ್ಸು ಮಾಡಿದರೆ ಅಸಮಾನ್ಯರಾಗಿ ಅದ್ಭುತ ಸಾಧನೆ ಮಾಡಬಹುದು. ಜಗತ್ತಿನಲ್ಲಿ ಸಾಧನೆ ಮಾಡಿರುವ ಮಹಾನ್ ಸಾಧಕರ ಉದಾಹರಣೆ ಸಹಿತ ವಿವರಿಸಿದ ಅವರು ಸ್ವಾಮಿ ವಿವೇಕಾನಂದರ 155ನೇ ಜನ್ಮದಿನಾಚರಣೆಯನ್ನು ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಸಡಗರ ಸಂಭ್ರಮದಿಂದ ಆಚರಿಸೋಣ ಎಂದರು.

ವಿದ್ಯಾರ್ಥಿಗಳು ಮೊಬೈಲ್ ಎಂಬ ಕಲರ್‌ಪೆಟ್ಟಿಗೆಯಿಂದ ದೂರ ಉಳಿದು ತಮ್ಮ ಜೀವನದ ಉತ್ತಮ ಗುರಿಯನ್ನು ಈಗಿನಿಂದಲೇ ನಿರ್ಧರಿಸಿಕೊಂಡು ಮಹಾನ್ ಸಾಧಕರಾಗಬೇಕೆಂದು ಯುವ ಜನತೆಯನ್ನು ಕುರಿತು ಮಾತನಾಡಿದರು.

ಸ್ವಾಮಿ ವಿವೇಕಾನಂದರ ಆದರ್ಶ ಮತ್ತು ಸಂದೇಶಗಳನ್ನು ಯುವ ಶಕ್ತಿ ತಮ್ಮ ಜೀವನದಲ್ಲಿ ರೂಢಿಸಿಕೊಂಡು ಧೀರ, ವೀರ ಪುತ್ರರಾಗಿ ಜೀವನ ಸಾಗಿಸಬೇಕೆಂದು ಒಂದು ಕಥೆಯ ಮೂಲಕ ವಿವರಿಸಿದರು.

ಯುವ ಶಕ್ತಿಯೆಂದರೆ ಈ ವಯಸ್ಸಿನಲ್ಲಿ ಮಹತ್ವರವಾದ ಸಾಧನೆಯನ್ನು ಸಾಧಿಸುವ ಹಂತ, ಯುವ ಶಕ್ತಿ ದಂಡ್ವ ಮಾರ್ಗತೋರೆದು ಸನ್ಮಾರ್ಗದಲ್ಲಿ ನಡೆದಲ್ಲಿ ಸಮಾಜದಲ್ಲಿ ಗುರುತಿಸುವ ಹಾಗೂ ಬೇರೆಯವರಿಗೆ ಆದರ್ಶ ವ್ಯಕ್ತಿಯಾಗಿ ಬದುಕಲು ಸಾಧ್ಯವಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಕಾಲೇಜ್‌ಗಳಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ ಅಂಗವಾಗಿ ಏರ್ಪಡಿಸಲಾದ ಪ್ರಬಂಧ, ಭಾಷಣ ಹಾಗೂ ಚರ್ಚಾ ಸ್ಪರ್ದೆಯಲ್ಲಿ ವಿಜೇತರಾದ ಯುವಕ-ಯುವತಿಯರಿಗೆ ಬಹುಮಾನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವಿ.ವಿ.ಜೋತ್ಸ್ನಾ, ಜಿ.ಪಂ ಮುಖ್ಯಕಾರ್ಯನಿರ್ವಹಣಾಧಿಕಾರಿ ಪಿ.ಎನ್ ರವೀಂದ್ರ, ನಗರಸಭೆ ಆಯುಕ್ತರಾದ ಸಿ.ಚಂದ್ರಪ್ಪ, ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ರೇವಣಸಿದ್ದಪ್ಪ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ನಾಗರಾಜಪ್ಪ,ಕೆ, ಸರ್ಕಾರಿ ಕಲಾ ಕಾಲೇಜು ಪ್ರಾಂಶುಪಾಲರುಗಳಾದ ಸುಧಾಕರ್, ಸೈನ್ಸ್ ಕಾಲೇಜು ಪ್ರಾಂಶುಪಾಲರಾದ ಸಣ್ಣಮ್ಮ ಹಾಗೂ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು. ಡಾ.ನಾಗರಾಜ್ ಸ್ವಾಗತಿಸಿದರು, ಗಂಗಾಧರ್ ವಂದಿಸಿದರು.

## ಬೊಮ್ಮೇನಹಳ್ಳಿಯಲ್ಲಿ ಮಲ್ಟಿಜಿಮ್ ಉದ್ಘಾಟನೆ

## ಆರೋಗ್ಯ ಸದೃಡತೆಗೆ ದೈಹಿಕ ಶ್ರಮ ಅಗತ್ಯ:ತಿಪ್ಪಾರೆಡ್ಡಿ



ಚಿತ್ರದುರ್ಗ

ಮನುಷ್ಯ ಸದೃಢರಾಗಬೇಕಾದರೆ ದೈಹಿಕ ಶ್ರಮ ಅಗತ್ಯವಾಗಿದ್ದು, ಇದೇ ರೀತಿ ಉತ್ತಮವಾದ ರಸ್ತೆಗಳಿದ್ದರೆ ಸಂಚಾರ ವ್ಯವಸ್ಥೆ ಸುಗಮವಾಗಲಿದೆ ಎಂದು ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ತಿಳಿಸಿದರು.

ಚಿತ್ರದುರ್ಗ ತಾಲ್ಲೂಕಿನ ಹಿರೇಗುಂಟನೂರು ಹೋಬಳಿ ಬೊಮ್ಮೇನಹಳ್ಳಿ ಗ್ರಾಮದಲ್ಲಿ ಶಾಸಕರ ಅನುದಾನದಡಿ ಜೈ ಮಾರುತಿ ಯುವಕರ ಬಳಗದವರಿಗೆ ಶಾಸಕರ ಅನುದಾನದಡಿ ರೂ.5.00 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾದ ಮಲ್ಟಿಜಿಮ್ ಮತ್ತು ಅಲೆಮಾರಿ ಯೋಜನೆಯಡಿ ಸದರಿ ಗ್ರಾಮದಲ್ಲಿ ದೊಂಬಿದಾಸರ ಕಾಲೋನಿಯಲ್ಲಿ ರೂ.10.00ಲಕ್ಷಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾದ ಸಿ.ಸಿ. ರಸ್ತೆ ಉದ್ಘಾಟನೆ ನೇರವೇರಿಸಿ ಮಾತನಾಡಿದರು.

ಇಂದಿನ ಯುವ ಜನತೆ ದಿಶ್ಚಟಗಳಿಂದ ದೂರ ಇರಬೇಕಾದರೆ ಈ ರೀತಿಯಾದ ಉತ್ತಮವಾದ ಹವ್ಯಾಸಗಳನ್ನು ಬೆಳಸಿಕೊಳ್ಳುವುದರ ಮೂಲಕ ತಮ್ಮ ಆರೋಗ್ಯ ಸಂಪತ್ತನ್ನು ಉತ್ತಮವಾಗಿ ಇಟ್ಟುಕೊಳ್ಳಬೇಕಿದೆ ಮುಂದಿನ ಪ್ರಜೆಗಳಾದ ನೀವುಗಳು ಆರೋಗ್ಯವಾಗಿದ್ದರೆ ದೇಶವನ್ನು ಪ್ರಗತಿಯತ್ತ ಕೊಂಡ್ಯೂಯಬಹುದಾಗಿದೆ ನಮ್ಮ ಕಾಲದಲ್ಲಿ ಈ ರೀತಿಯಾದ ಸೌಲಭ್ಯಗಳಿಲ್ಲದೆ ಕಲ್ಲುಗಳನ್ನು ಎತ್ತುವುದರ ಮೂಲಕ ಕಸರತ್ತ ಮಾಡಲಾಗುತಿತ್ತು ಆದರೆ ಈಗ ಸರ್ಕಾರ ಯುವಜನತೆ ಉತ್ತಮವಾದ ಆರೋಗ್ಯವನ್ನು ಹೊಂದಲಿ ಎಂಬ ದೃಷ್ಟಿಯಿಂದ ಈ ರೀತಿಯಾದ ಸೌಲಭ್ಯವನ್ನು ನೀಡುತ್ತಿದೆ ಇಉದರ ಸದುಪಯೋಗ ಪಡೆಯುವಂತೆ ಮನವಿ ಮಾಡಿದರು.

ಈಗಾಗಲೇ ನನ್ನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧೆಡೆಗಳಲ್ಲಿ ಈ ರೀತಿಯಾದ ಮಲ್ಟಿಜಿಮ್ ಗಳನ್ನು ನೀಡಲಾಗಿದೆ, ನಾನು ಸಹಾ ಕ್ರೀಡಾಪಟು ಆಗಿರುವುದರಿಂದ ಕ್ರೀಡೆಗೆ ಹೆಚ್ಚಿನ ಒತ್ತು ನೀಡಲಾಗಿದೆ, ಯುವಜನತೆ ದುಶ್ಚಟಗಳಿಂದ ದೂರ ಇದ್ದು ಆರೋಗ್ಯ ಸಂಪತ್ತನ್ನು ಕಾಪಾಡಿಕೊಳ್ಳಿ ಎಂದ ಶಾಸಕರು, ಸರ್ಕಾರ ಉತ್ತಮವಾದ ರಸ್ತೆಗಳ ನಿರ್ಮಾಣಕ್ಕೂ ಸಹಾ ಆದ್ಯತೆ ನೀಡುತ್ತಿದೆ ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಇರುವ ಕೇರಿಗಳಲ್ಲಿ ಉತ್ತಮವಾದ ರಸ್ತೆಗಳನ್ನು ನಿರ್ಮಾಣ ಮಾಡಲು ಸಾಕಷ್ಟು ಹಣವನ್ನು ನೀಡಿದೆ ಇದು ಸಹಾ ಉತ್ತಮ ರೀತಿಯಲ್ಲಿ ಕಾಮಗಾರಿ ಆಗಿ ಅದು ಬಹು ದಿನ ಬಾಳಿಕೆ ಬರುವಂತೆ ಮಾಡಬೇಕಿದೆ ಜನತೆಯೂ ಸಹಾ ರಸ್ತೆಗಳನ್ನು ಅಗಿಯದೆ ಅದನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಿ ಇದರಿಂದ ಹಲವಾರು ವರ್ಷ ಬಾಳಿಕೆ ಬರುತ್ತದೆ ಎಂದು ಜನತೆಗೆ ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ತಾ.ಪಂ ಸದಸ್ಯರಾದ ಕ್ವರಿಯಣ್ಣ, ಮಾಜಿ ಗ್ರಾ.ಪಂ ಅಧ್ಯಕ್ಷರಾದ ಮಂಜುನಾಥ್, ಗ್ರಾ.ಪಂ ಸದಸ್ಯರುಗಳಾದ ಜಗದೀಶ್, ಪಾಲಯ್ಯ, ಯರ್ರಿಸ್ವಾಮಿ, ರಮೇಶ್, ಬಲಿಜ ಸಂಘದ ಅಧ್ಯಕ್ಷರಾದ ಗೋವರ್ಧನ್, ಜೈ ಮಾರುತಿ ಯುವಕ ಬಳಗದ ಸೋಮಶೇಖರ್, ಧನಚಿಜಯ, ಮುರಳೀಧರ, ಹರೀಶ್ ಸೇರಿದಂತೆ ಗ್ರಾಮದ ಮುಖಂಡರುಗಳು ಹಾಜರಿದ್ದರು.



ಹಿರಿಯೂರಿನಲ್ಲಿ ಜರುಗಿದ ಮುಗಿಲ ಮುತ್ತು ಕವನ ಸಂಕಲನ ಬಿಡುಗಡೆ ಸಮಾರಂಭದಲ್ಲಿ ಕವಿ ರುದ್ರುಸ್ವಾಮಿ ಅವರನ್ನು ಕವಿಶೈಲ ತಂಡದ ತಿಪ್ಪಯ್ಯ ಒಡೆರ್ಯ ಮತ್ತು ಸ್ನೇಹಿತರು ಅಭಿನಂದಿಸಿದರು.

## ದೇಶದ ಅಭಿವೃದ್ಧಿಗೆ ಶ್ರಮಿಸಲು ಸಲಹೆ

ಚಿತ್ರದುರ್ಗ

ಭಾವೈಕ್ಯತೆ ಮತ್ತು ಏಕತೆ ಯೋಗ, ಧ್ಯಾನ, ಉತ್ತಮ ಚಿಂತನೆ ಮತ್ತು ದೇಶಾಭಿಮಾನ ಬೆಳಸಿಕೊಳ್ಳುವುದರೊಂದಿಗೆ ವಿದ್ಯಾರ್ಥಿ ಯುವಜನತೆ ದೇಶದ ಅಭಿವೃದ್ಧಿಗೆ ಶ್ರಮಿಸಬೇಕೆಂದು ಎಸ್.ಜೆ.ಎಂ. ಮಹಾವಿದ್ಯಾಲಯದ ಪ್ರಚಾರ್ಯರಾದ ಪ್ರೋ.ಹೆಚ್ .ಸಿ.ಗಂಗಾಂಬಿಕೆಯವರು ತಿಳಿಸಿದರು.

ಚಂದ್ರವಳ್ಳಿ ಎಸ್.ಜೆ.ಎಂ. ಕಾಲೇಜಿನ ಆವರಣದಲ್ಲಿ ನಡೆದ ಸ್ವಾಮಿವಿವೇಕಾನಂದರ ಜನ್ಮ ದಿನಚಾರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಉತ್ತಮ ಸನ್ಮಾರ್ಗದಲ್ಲಿ ಮುನ್ನಡೆಯುವ ಮೂಲಕ ದೇಶದ ಅಸ್ತಿಯಾಗಬೇಕು. ದೇಶಕ್ಕಾಗಿ ತ್ಯಾಗ ಬಲಿದಾನ ಮಾಡಿದ ಅನೇಕ ಮಹನೀಯರ ಜೀವನ ತತ್ವ ಆದರ್ಶಗಳನ್ನು ಅಳವಡಿಸಿಕೊಂಡು ಸಮಾಜದಲ್ಲಿ ಉತ್ತಮ ನಾಗರೀಕರಾಗಿ ಬಾಳಬೇಕಾಗಿದೆ. ಸಮೃದ್ಧ ಭಾರತ ನಿರ್ಮಾಣ ಮಾಡುವ ಹೋಣೆಗಾರಿಕೆ ವಿದ್ಯಾರ್ಥಿ ಯುವಜನರ ಮೇಲಿದೆ. ನಾವೆಲ್ಲರು ಭಾರತೀಯರು ಎಂಬ ಭಾವನೆಯಿಂದ ಬದುಕಿದಾಗ ಮಾತ್ರ ದೇಶ ಸದೃಢರಾಗಲು ಸಾಧ್ಯವೆಂದು ತಿಳಿಸಿದರು. ಮುಖ್ಯಅತಿಥಿಗಳಾಗಿ ಆಗಮಿಸಿದ ಇತಿಹಾಸ ವಿಭಾಗದ ಪ್ರದ್ಯಾಪಕರಾದ ಪ್ರೋ.ಬಿ.ಎಸ್. ಉಮಾಮಹೇಶ್ವರ್ ಹಾಗೂ ಅಂತಿಮ ಬಿಕಾಂ. ವಿದ್ಯಾರ್ಥಿನಿ ನಾಗಶ್ರೀಯವರು ಮಾತನಾಡಿ ಸ್ವಾಮಿ ವಿವೇಕಾನಂದರವರ ಜೀವನ ಹಾಗೂ ಹೋರಾಟದ ಬಗ್ಗೆ ತಿಳಿಸಿದರು. ಎಸ್.ಜೆ.ಎಂ. ಕಾಲೇಜಿನ ದೈಹಿಕ ಶಿಕ್ಷಣ ಅಧಿಕಾರಿ ಮಕ್ಸೂದ್ ಅಹಮ್ಮದ್ ಸ್ವಾಗತಿಸಿದರು. ಎನ್.ಎಸ್.ಎಸ್.ಅಧಿಕಾರಿ ರೇವಣ್ಣ ವಂದಿಸಿದರು. ಎನ್.ಸಿ.ಸಿ.ಅಧಿಕಾರಿ ಕೇದರ್‌ನಾಥ್ ಕಾರ್ಯಕ್ರಮ ನಿರೂಪಿಸಿದರು. ನಂತರ ಸ್ವಾಮಿವಿವೇಕಾನಂದರ ಜಯಂತಿ ಅಂಗವಾಗಿ ಕಾಲೇಜಿನ ಆವರಣದಲ್ಲಿ ಸಸಿ ನಡುವಿಕೆ ಹಾಗೂ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.

## ಉಗ್ರಾಣ ಮಳಿಗೆ ಉದ್ಘಾಟನೆ

ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟದ ಸಹಕಾರ ಸಂಘ ನಿ, ಇದರಿಂದ ಎ.ಪಿ.ಎಂ.ಸಿ.ಆವರಣದಲ್ಲಿ ನಿರ್ಮಾಣ ಮಾಡಿರುವ 1000 ಮೆಟ್ರಿಕ್ ಟನ್ ಸಾಮರ್ಥ್ಯದ ಉಗ್ರಾಣದ ಉದ್ಘಾಟನೆಯನ್ನು ಜನವರಿ 15 ರಂದು ಬೆಳಗ್ಗೆ 10.30 ಕ್ಕೆ ಎ.ಪಿ.ಎಂ.ಸಿ. ಸಿ' ಬ್ಲಾಕ್ ಆವರಣದಲ್ಲಿ ಏರ್ಪಡಿಸಲಾಗಿದೆ.

ಸಾಣೇಹಳ್ಳಿ ಶಾಖಾ ಮಠದ ಡಾ; ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ಸಾನಿಧ್ಯ ವಹಿಸುವರು. ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್.ಆಂಜನೇಯವರು ಉಗ್ರಾಣದ ಉದ್ಘಾಟಿಸುವರು. ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕರಾದ ಜಿ.ಹೆಚ್ .ತಿಪ್ಪಾರೆಡ್ಡಿ ಅಧ್ಯಕ್ಷತೆ ವಹಿಸುವರು.

## ಕಾಳಘಟ್ಟದಲ್ಲಿ ಸಾಮೂಹಿಕ ಸೀಮಂತ ಕಾರ್ಯಕ್ರಮ

## ಶ್ರೀಮಂತಿಕೆ ಯಾವತ್ತಿಗೂ ಶಾಶ್ವತವಲ್ಲ:ಆಂಜನೇಯ

ಚಿತ್ರದುರ್ಗ

ಹಣ ಸಂಪತ್ತು ಯಾವತ್ತಿಗೂ ಶಾಶ್ವತವಲ್ಲ, ಅದೇನಿದ್ದರೂ ಕ್ಷಣಿಕವಷ್ಟೇ. ಆದರೆ ನಾವು ಮಾಡುವ ಸಮಾಜ ಮುಖಿ ಕಾರ್ಯಗಳು ಮಾತ್ರ ಜನರ ಮನಸಲ್ಲಿ ಉಳಿಯುತ್ತದೆ ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಹೆಚ್. ಆಂಜನೇಯ ಅಭಿಪ್ರಾಯ ಪಟ್ಟರು

ಹೊಳಲ್ಕೆರೆ ತಾಲ್ಲೂಕಿನ ಕಾಳಘಟ್ಟ ವಡ್ಡರಹಟ್ಟಿಯಲ್ಲಿ ಶುಕ್ರವಾರದಂದು ಬೋವಿ ಅಭಿವೃದ್ಧಿ ನಿಗಮದ ನಿರ್ದೇಶಕ ವಿ.ಹನುಮಂತಪ್ಪ ದಂಪತಿಗಳ 25ನೇ ವರ್ಷದ ವೈವಾಹಿಕ ಸಂಭ್ರಮ ಹಾಗೂ ಸಾಮೂಹಿಕ ಸೀಮಂತ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಚಿವರು ಮಾತನಾಡಿದರು.

ಬಡತನದಿಂದ ಬಂದವರು, ನೋವು, ಅಪಮಾನಗಳನ್ನು ಸಹಿಸಿಕೊಂಡು ಬದುಕು ಕಟ್ಟಿ ಕೊಂಡವರು ಮಾತ್ರ ಸಮಾಜಮುಖಿಯಾಗಿ ಚಿಂತನೆ ಮಾಡುತ್ತಾರೆ. ಬದುಕಿನ ಬವಣೆಯನ್ನು ಅರ್ಥಮಾಡಿಕೊಂಡು ಸಮಾಜದಲ್ಲಿ ಉತ್ತಮ ನಾಗರೀಕರಾಗಿ ಬದುಕಲು ಪ್ರಯತ್ನಿಸುತ್ತಾರೆ. ಅಂತಹವರ ಸಾಲಿನಲ್ಲಿ ವಿ.ಹನುಮಂತಪ್ಪ ಗೋಡೆಮನೆ ಅವರು ಸೇರುತ್ತಾರೆಂದು ಶ್ಲಾಘಿಸಿದರು



ಮನುಷ್ಯನಿಗೆ ಹಣ ಸಂಪತ್ತು ಬಂದಕೂಡಲೇ ಜೀವನ ಶೈಲಿಯೇ ಬದಲಾಗಿ ಬಿಡುತ್ತದೆ. ಗಳಿಸಿದ ಸಂಪತ್ತು ಮತ್ತು ಹಣ ಶಾಶ್ವತವಾಗಿಯೇ ಇರುತ್ತದೆ ಎನ್ನುವ ಭ್ರಮೆಯಲ್ಲಿ ಕೆಲವರು ಇರುತ್ತಾರೆ. ಆದರೆ ಬಡತನವೇ ಶಾಶ್ವತವಾಗಿರುತ್ತದೆ. ನಾವು ಏನೇ ಸಂಪಾದನೆ ಮಾಡಿದರು ನೋಂದವರು, ಬಡವರ ಸಂಕಟಗಳನ್ನು ಅರ್ಥಮಾಡಿಕೊಳ್ಳದಿದ್ದರೆ ಯಾವುದೂ ಸಾರ್ಥಕವಾಗುವುದಿಲ್ಲ, ಬಡವರ ಕಣ್ಣೀರು ಒರೆಸುವ ಕಾಯಕ ನಮ್ಮದಾಗಬೇಕು ಎಂದರು

ಹನುಮಂತಪ್ಪ ಗೋಡೆಮನೆ ದಂಪತಿಗಳದ್ದು ಪ್ರೇಮ ವಿವಾಹ. 25 ವರ್ಷಗಳ ಕಾಲ ಬದುಕನ್ನು ಒಬ್ಬರಿಗೊಬ್ಬರು ಅರ್ಥಮಾಡಿಕೊಂಡು ಬಂದಿದ್ದಾರೆ. ಹನುಂತಪ್ಪ ಅವರ »» 5ನೇ ಪುಟಕ್ಕೆ

## ಹೊಳಲ್ಕೆರೆಯಲ್ಲಿ ನಡೆದ ಬಿ.ಜೆ.ಪಿ ಪರಿವರ್ತನಾ ಯಾತ್ರೆಯ ಯಶಸ್ವಿಗೆ

## ಮುಖಂಡರು, ಕಾರ್ಯಕರ್ತರು-ಅಭಿಮಾನಿಗಳೆ ಕಾರಣ:ಎಂ.ಚಂದ್ರಪ್ಪ

ಹೊಳಲ್ಕೆರೆ

ಬಿ.ಜೆ.ಪಿ ಪರಿವರ್ತನಾ ಯಾತ್ರಾ ಸಮಾರಂಭ ಹೊಳಲ್ಕೆರೆಯಲ್ಲಿ ಅದ್ದೂರಿಯಾಗಿ ನಡೆಯಲು ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತು ಅಭಿಮಾನಿಗಳ ಸಂಪೂರ್ಣ ಸಹಕಾರ ಮತ್ತು ಆಶೀರ್ವಾದದಿಂದ ಯಶಸ್ವಿಯಾಗಲು ಕಾರಣವಾಯಿತು. ಆದ್ದರಿಂದ ಇವರ ಸ್ಪಂದನೆಗೆ ನಾನು ಮನಃಪೂರ್ವಕವಾಗಿ ಅಭಿನಂದನೆಗಳನ್ನ ಸಲ್ಲಿಸುತ್ತೇನೆ ಎಂದು ಮಾಜಿ ಶಾಸಕ ಹಾಗೂ ಬಿ.ಜೆ.ಪಿ. ಮುಖಂಡ ಎಂ.ಚಂದ್ರಪ್ಪ ಮೆಚ್ಚುಗೆಯನ್ನ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರಿಗೆ ವ್ಯಕ್ತಪಡಿಸಿದರು.

ಕಳೆದ ಬುಧುವಾರ ಹೊಳಲ್ಕೆರೆ ಪಟ್ಟಣದ ಕೊಟ್ರೆ ನಂಜಪ್ಪ ಪದವಿಪೂರ್ವ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ ಬಿ.ಜೆ.ಪಿ ಪರಿವರ್ತನಾ ಯಾತ್ರೆಯ ಸಮಾರಂಭಕ್ಕೆ ರಾಷ್ಟ್ರೀಯ ಬಿ.ಜೆ.ಪಿ. ಅಧ್ಯಕ್ಷ ಅಮಿತ್ ಶಾ ಅವರ ಆಗಮನದಿಂದ ಇಡೀ ಬಿ.ಜೆ.ಪಿ ಪಕ್ಷದ ಕಾರ್ಯಕರ್ತರು ರಾಜ್ಯ ಹಾಗೂ ರಾಷ್ಟ್ರ ನಾಯಕರು ಸಂತೋಷವನ್ನ ವ್ಯಕ್ತಪಡಿಸಿದ್ದಾರೆ. ಈ ಕ್ಷೇತ್ರದ ಜನರು ನನ್ನ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸವನ್ನು ಕಂಡು ನನಗೆ ಅತೀವ ಸಂತೋಷವಾಗಿದೆ ಈ ಕ್ಷೇತ್ರದ ಅಭಿವೃದ್ಧಿಗೆ ನನ್ನ ಅವಧಿಯಲ್ಲಿ ನಿಸ್ವಾರ್ಥ ಸೇವೆಯನ್ನ ಸಲ್ಲಿಸಿದ್ದು ಅದರ ಪ್ರತಿಫಲವನ್ನ ಕಣ್ಣಾರೆ ಕಂಡು ತುಂಬಾ ಸಂತೋಷಪಟ್ಟಿದ್ದೇನೆ. ನಾನು ಚುನಾವಣೆಯಲ್ಲಿ ಸೋತಿದ್ದರು ಸಹ ಕ್ಷೇತ್ರದ ಮಹಾಜನಗಳು ನನ್ನ ಮೇಲೆ ಅಭಿಮಾನವನ್ನ ಈ ಸಮಾರಂಭದಲ್ಲಿ ಪ್ರದರ್ಶನ ಮಾಡಿದ್ದಾರೆ. ಮುಂದೆ ಈ ಕ್ಷೇತ್ರದ ಜನರ ಋಣವನ್ನ ತೀರಿಸುತ್ತೇನೆಂದು ತಮ್ಮ ಮನದಾಳದ ಇಂಗಿತವನ್ನ ಚಂದ್ರಪ್ಪ ವ್ಯಕ್ತಪಡಿಸಿದರು.



ಹೊಳಲ್ಕೆರೆ ಕ್ಷೇತ್ರ ಇಡೀ ರಾಜ್ಯ, ರಾಷ್ಟ್ರವಲ್ಲದೆ ವಿಶ್ವದ್ಯಾದಂತ ಹೆಸರನ್ನ ಪ್ರಚಾರ ಮಾಡಿದ ನನ್ನ ಪ್ರೀತಿಯ ಮಾಧ್ಯಮ ಮಿತ್ರರಿಗೆ ನನ್ನ ಅಭಿನಂದನೆಗಳನ್ನ ಅರ್ಪಿಸುತ್ತಿದ್ದೇನೆ. ಈ ಸಮಾರಂಭದಲ್ಲಿ ರಾಷ್ಟ್ರ, ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ನೂರಾರು ನಾಯಕರುಗಳು ಭಾಗವಹಿಸಿ ಎಂದೂ ಕಂಡರಿಯದ ಜನಸ್ತೋಮವನ್ನ ನೋಡಿ ಆಶ್ಚರ್ಯಪಟ್ಟರು. ಇದರ ಶ್ರೇಯಸ್ಸಿಗೆ ಶ್ರಮಿಸಿದ ಪಕ್ಷದ ಎಲ್ಲ ಕಾರ್ಯಕರ್ತರನ್ನ ಮತ್ತು ಅಭಿಮಾನಿಗಳನ್ನ ನಾನು ಎಂದಿಗೂ ಮರೆಯುವುದಿಲ್ಲ ಎಂದು ಚಂದ್ರಪ್ಪ ಪ್ರಶಂಸಿದರು.

ಹೊಳಲ್ಕೆರೆಯಲ್ಲಿ ಬಿ.ಜೆ.ಪಿ ಪರಿವರ್ತನಾ ಯಾತ್ರೆಯನ್ನ ಹಮ್ಮಿಕೊಳ್ಳಬೇಕೆಂದು ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಮತ್ತು ರಾಜ್ಯಾಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಅವರಲ್ಲಿ ತಾವು ಮನವಿ ಮಾಡಿದಾಗ ಅವರು ತುಂಬ ಹೃದಯದಿಂದ ಒಪ್ಪಿಗೆಯನ್ನ ನೀಡಿದ ಪ್ರಯುಕ್ತ ಹೊಳಲ್ಕೆರೆ ಪಟ್ಟಣದಲ್ಲಿ ಅದ್ಭುತವಾದ ಜನಸ್ತೋಮ ಕಾರ್ಯಕ್ರಮವನ್ನ ಹಮ್ಮಿಕೊಳ್ಳಲಾಯಿತು. ಇದು ತಮ್ಮ ಆಸೆಯನ್ನ ನಾಯಕರುಗಳು ಈಡೇರಿಸಿದ ಬಗ್ಗೆ ಸಂತೋಷವಾಗಿದೆ ಎಂದು ಚಂದ್ರಪ್ಪ ತಿಳಿಸಿದರು.

ಈ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಮತ್ತು ಬಿ.ಜೆ.ಪಿ ಮುಖಂಡ ಎಲ್.ಬಿ.ರಾಜಶೇಖರ್, ತಾಲ್ಲೂಕು ಬಿ.ಜೆ.ಪಿ ಮಾಜಿ ಅಧ್ಯಕ್ಷ ನುಲೇನೂರು ಜಿ.ಈಶ್ವರಪ್ಪ, ತಾ.ಪಂ. ಮಾಜಿ ಅಧ್ಯಕ್ಷೆ ಅಂಗಡಿ ಹಾಲಮ್ಮ, ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷ ಬಿ.ಬಿ.ಕುಮಾರ್, ಬಿ.ಜೆ.ಪಿ. ಮುಖಂಡ ಡಾ|| ಹೆಚ್.ಜಿ.ಉಮಾಪತಿ, ಬಸವರಾಜ್ ಮತ್ತಿತರ ನಾಯಕರು ಉಪಸ್ಥಿತರಿದ್ದರು.

## ಎಸ್ಸಿ-ಎಸ್ಟಿ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣೆ

## ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್ ಟಾಪ್ ವಿತರಣೆಗೆ ಸಿಎಂ ಮೇಲೆ ಒತ್ತಡ : ಶಾಸಕ

ಚಳ್ಳಕೆರೆ

ಪ್ರಸ್ತುತ ಶೈಕ್ಷಣಿಕ ಪ್ರಗತಿ ಬಹುತೇಕ ತಾಂತ್ರಿಕಾಂಶಗಳ ಮೇಲೇಯೇ ಅವಲಂಬಿತವಾಗಿದೆ. ಕಾಲೇಜುಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಕನಸನ್ನು ನನಸು ಮಾಡಿಕೊಳ್ಳಲು ಉತ್ತಮವಾಗಿ ಅಭ್ಯಾಸ ಮಾಡುವುದೊಂದೇ ನಿಮ್ಮ ಮುಂದಿರುವ ಸವಾಲಾಗಿದೆ. ಸರ್ಕಾರ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಹಲವಾರು ಯೋಜನೆಗಳಲ್ಲಿ ನೆರವು ನೀಡುತ್ತಿದ್ದು, ಈ ನೆರವನ್ನು ಸದುಪಯೋಗ ಪಡೆಸಿಕೊಳ್ಳುವತ್ತ ವಿದ್ಯಾರ್ಥಿ ಸಮುದಾಯ ಮುಂದಾಗಬೇಕು ಎಂದರು.

ಅವರು, ಶುಕ್ರವಾರ ಇಲ್ಲಿನ ಎಚ್‌ಪಿಪಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜಿನ ಎಸ್ಸಿ-ಎಸ್ಟಿ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣೆ, ಯುವ ಜನೋತ್ಸವ ಹಾಗೂ ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪ್ರಸ್ತುತ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ಈ ಸೌಲಭ್ಯ ನೀಡುತ್ತಿದೆ. ಬೇರೆ ಸಮುದಾಯದ ವಿದ್ಯಾರ್ಥಿಗಳಿಗೂ ಸಹ ಈ ವ್ಯವಸ್ಥೆ ಮುಂದುವರೆಯುವ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್‌ಟಾಪ್ ನೀಡುವಂತೆ ಮನವಿ ಸಲ್ಲಿಸುತ್ತೇನೆ. ಯುವಕರು ಈ ಸಮಾಜದ ಬೆಲೆಕಟ್ಟಲಾಗದ ಆಸ್ತಿಯಾಗಿದ್ದು, ನಿಮ್ಮಲ್ಲಿರುವ



ಉತ್ತಮ ಭಾವನೆಗಳು ಈ ಸಮಾಜಕ್ಕೆ ಭದ್ರವಾದ ನೆಲೆಯನ್ನು ಒದಗಿಸುತ್ತವೆ. ಸ್ವಾಮಿವಿವೇಕಾನಂದರೇ ನೂರಾರು ವರ್ಷಗಳ ಹಿಂದೆಯೇ ಯುವ ಶಕ್ತಿಯೇ ಈ ದೇಶ ಸಂಪತ್ತು ಎಂದಿದ್ದರು. ಸ್ವಾಮಿವೇಕಾನಂದರು ಕೇವಲ 39 ವರ್ಷಗಳ ಅಲ್ಪಕಾಲದಲ್ಲಿಯೇ ವಿಶ್ವವೇ ಮೆಚ್ಚುವಂತಹ ಅಘಾದ ಜ್ಞಾನವನ್ನು ದೇಶಕ್ಕೆ ಪರಿಚಯಿಸಿದ್ದು, ವಿದ್ಯಾರ್ಥಿಗಳು ಸಹ ಇವರ ದೇಯೋದ್ದೇಶಗಳನ್ನು ಅಳವಡಿಸಿಕೊಳ್ಳುವಂತೆ ಮನವಿ ಮಾಡಿದರು.

ಎಸ್‌ಐಬಿ ಬ್ಯಾಂಕ್ ವ್ಯವಸ್ಥಾಪಕ ಆರ್. ಸತೀಶ್ ಮಾತನಾಡಿ, ಸ್ವಾಮಿವಿವೇಕಾನಂದ ಹೆಸರೇ ಸದ್ಭಾವನೆಗಳನ್ನು ಮೂಡಿಸುವಂತಹ ಶಕ್ತಿಶಾಲಿ ಪದವಾಗಿದೆ. ಇಂದು ಇಡೀ ಜಗತ್ತಿನಲ್ಲಿ ಸ್ವಾಮಿವೇಕಾನಂದರ ವಾಣಿ ಎಂದರೆ ಎಲ್ಲರೂ ಅದರತ್ತ ಗಮನರಿಸುತ್ತಾರೆ. ಇವರ ದಿವ್ಯವಾಣಿಯಲ್ಲಿ ಇಡೀ ರಾಷ್ಟ್ರವೇ ಒಪ್ಪಿಕೊಳ್ಳುವಂತಹ ಅನೇಕ ಅಂಶಗಳು ಅಡಗಿವೆ. ರಾಷ್ಟ್ರದ ಪ್ರತಿನಿಧಿಯಾಗಿ ಚಿಕಾಗೋಗೆ ತೆರಳಿದ ಅವರು ಅಲ್ಲಿ ಮಾಡಿದ ಭಾಷಣ ಈ ದೇಶದ ಗೌರವವನ್ನು ಉತ್ತುಂಗಕ್ಕೆ ಏರಿಸಿದೆ. ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಅಭ್ಯಾಸದ ಜೊತೆಯಲ್ಲಿ ಸ್ವಾಮಿವಿವೇಕಾನಂದರ ಆದರ್ಶಗಳನ್ನೂ ಸಹ ಪಾಲಿಸಿದಲ್ಲಿ ಮಾತ್ರ ಈ ಸಮಾಜಕ್ಕೆ ಆ ವಿದ್ಯಾರ್ಥಿ ಏನನ್ನಾದರೂ ಕೊಡುಗೆ ನೀಡುವ ಸಾಮರ್ಥ್ಯವನ್ನು ಪಡೆಯುತ್ತಾನೆ. ಇಂತಹ ಮಹಾನ್ ದೇಶ ಭಕ್ತನನ್ನು ಪಡೆದ ನಾವೆಲ್ಲರೂ ಧನ್ಯರು ಎಂದರು.

ಪ್ರಾಂಶುಪಾಲ ಪ್ರೊ.ಜಿ.ವೆಂಕಟೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ಕಾಲೇಜಿನಲ್ಲಿ ದ್ವಿತೀಯ ವರ್ಷದ 294 ಎಸ್ಸಿ-ಎಸ್ಟಿ ವಿದ್ಯಾರ್ಥಿಗಳಿದ್ದು ಸಾಂಕೇತಿಕವಾಗಿ 65ವಿದ್ಯಾರ್ಥಿಗಳಿಗೆ ಈ ಲ್ಯಾಪ್‌ಟಾಪ್ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಉಳಿದ ಎಲ್ಲಾ ವಿದ್ಯಾರ್ಥಿಗಳಿಗೂ ಲ್ಯಾಪ್‌ಟಾಪ್ ವಿತರಣೆ ಮಾಡಲಾಗುವುದು. ಸರ್ಕಾರ ವಿದ್ಯಾರ್ಥಿಗಳ ಭವಿಷ್ಯವನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಲ್ಯಾಪ್‌ಟಾಪ್ ನೀಡಿದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಹೆಚ್ಚಾಗಿ ಪಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ನಗಸರಭಾ ಸದಸ್ಯೆ ಲಕ್ಷ್ಮಿದೇವಿ, ಕಾಲೇಜು ಕಮಿಟಿ ಸದಸ್ಯರಾದ ರಂಗಸ್ವಾಮಿ, ವೆಂಕಟೇಶ್, ಅನ್ವರ್ ಮಾಸ್ಟರ್, ಎಂ.ಶಿವಲಿಂಗಪ್ಪ, ಕೆ.ಚಿತ್ತಯ್ಯ, ಪಾಪಣ್ಣ, ಸಿ.ಸುರೇಶ್, ನಾಗಭೂಷಣ್, ಕವಿತಾ, ಜಮುನಾರಾಣಿ, ಶಾಂತವೀರಮ್ಮ ಮುಂತಾದವರು ಉಪಸ್ಥಿತರಿದ್ದರು.

## ನಮ್ಮ ದೇಶದ ಸಂಸ್ಕೃತಿ ಉಳಿದಿರೋದು

## ಹಳ್ಳಿಗಳಲ್ಲಿ ಮಾತ್ರ : ಶ್ರೀ ರವಿಶಂಕರ ಗುರೂಜಿ



ಹಿರಿಯೂರು

ಹಳ್ಳಿಗಳು ಈ ದೇಶದ ಸಂಸ್ಕೃತಿಯ ಪ್ರತೀಕ, ನಮ್ಮ ದೇಶದ ಸಂಸ್ಕೃತಿ ಉಳಿದಿರೋದು ಹಳ್ಳಿಗಳಲ್ಲಿ ಮಾತ್ರ, ಚಿಕ್ಕ ಚಿಕ್ಕ ಹಳ್ಳಿಗಳು ಮೂಲಭೂತ ಸೌಲಭ್ಯಗಳು ಹಾಗೂ ಶಿಕ್ಷಣದಿಂದ ಅಭಿವೃದ್ಧಿಹೊಂದಿದರೆ ಈ ನಾಡು ಬೆಳೆಯುತ್ತದೆ ಈ ದೇಶ ಅಭಿವೃದ್ಧಿ ಆಗುತ್ತದೆ ಎಂಬುದಾಗಿ ಶ್ರೀ ಶ್ರೀ ರವಿಶಂಕರಗುರೂಜಿಯವರು ಅಭಿಪ್ರಾಯಿಸಿದರು.

ನಗರದ ವಾಗ್ದೇವಿ ವಿದ್ಯಾಸಂಸ್ಥೆ ಆವರಣದಲ್ಲಿ ಆರ್ಟ್ ಆಫ್ ಲಿವಿಂಗ್, ಆರ್ಯ ವೈಶ್ಯ ಮಂಡಳಿ ಹಾಗೂ ಕನ್ಯಕಾ ಸೌಹಾರ್ದಸಹಕಾರ ಸಂಘದ ಇವರುಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಸತ್ಸಂಗ ಹಾಗೂ ಪ್ರವಚನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ದೇಶದಲ್ಲಿ ಯಾವುದಕ್ಕೂ ಕೊರತೆಯಿಲ್ಲ ಸಕಲಸಂಪತ್ತು ಸಂಮೃದ್ಧಿಯಾಗಿದೆ. ಅದನ್ನು ಜನತೆ ಬಳಸಿಕೊಳ್ಳುವಂತಾಗಬೇಕು, ಜೀವನದಲ್ಲಿ ನಾಲ್ಕು ಅಂಶಗಳು ಬಹಳ ಪ್ರಮುಖಪಾತ್ರ ವಹಿಸುತ್ತವೆ. ಮೊದಲು ಭಕ್ತಿಯಿದ್ದರೆ ಶಕ್ತಿ ಬರುತ್ತದೆ, ಶಕ್ತಿಯಿದ್ದರೆ ಯುಕ್ತಿ, ಮುಕ್ತಿ ದೊರಕುತ್ತದೆ, ಮಗು, ತಾಯಿಯನ್ನು ಎಷ್ಟು ಪ್ರೀತಿ ಮಮತೆಯಿಂದ ಪ್ರೀತಿಸುತ್ತದೋ ಹಾಗೆ ನಾವು ಭಗವಂತನನ್ನು ಪ್ರೀತಿಸಬೇಕು, ಹಾಗೂ ಆರಾಧಿಸಬೇಕು. ಭಕ್ತಿ ಇದ್ದರೆ ಧೈರ್ಯ ದೇಶಭಕ್ತಿ ಮೂಡುತ್ತದೆ ಎಂಬುದಾಗಿ ಹೇಳಿದರು.

ನಮ್ಮ ಯುವಕರಿಗೆ ಸ್ವಾಮಿವಿವೇಕಾನಂದ ಆದರ್ಶವಾಗಬೇಕು. ಪ್ರತಿ ಯುವಕರು »» 4ನೇ ಪುಟಕ್ಕೆ